# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 | ENGLISH DAILY | Subscription Yearly - Rs. - | TUESDAY | 22-11-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಜೋಳ ಬೇಡಿಕೆ ಹೆಚ್ಚಳ, ಇಳಿಕೆಯಲ್ಲಿದ್ದ ದರ ಹೆಚ್ಚಳ

ಹಿಂದಿನ ತಿಂಗಳ ಹೊಸ ಬೆಳೆಯ ಆವಕ ಆರಂಭವಾದಾಗ ಇಳಿಕೆಯಾಗಿದ್ದ ಜೋಳ ದರ, ಪೌಲ್ಟ್ರಿ ವಲಯ ಹಾಗೂ ಕೈಗಾರಿಕಾಗಳಿಂದ ಬೇಡಿಕೆ ಹೆಚ್ಚಳವಾದುದರಿಂದ ದರ ಮತ್ತೆ ಹೆಚ್ಚಳವಾಗಿದ್ದು, ಇನ್ನೂ ಹೆಚ್ಚಳವಾಗುವ ಸಾಧ್ಯತೆಯಿದೆ. ರಫ್ತು ಬೇಡಿಕೆಯೂ ಹೆಚ್ಚಳವಾಗುತ್ತಿದೆ. ಖಾರೀಫ್ ಬೆಳೆಯ ಕೊನೆಯ ಹಂತದಲ್ಲಿ ಹೆಚ್ಚಿದ ಮಳೆಯಿಂದ ಕಟಾವು ವಿಳಂಬವಾಗಿ ಅಕ್ಟೋಬರ್ ತಿಂಗಳಲ್ಲಿ ಆವಕ ಇಳಿಕೆಯಾಗಿತ್ತು. ನವೆಂಬರ್ ತಿಂಗಳಲ್ಲಿ ಆವಕ ದಾಖಲೆ ಪ್ರಮಾಣದ ಹೆಚ್ಚಳವಾದರೂ ಹೆಚ್ಚಳವಾದ ದೇಶೀ ಹಾಗೂ ರಫ್ತು ಬೇಡಿಕೆಯಿಂದ ದರವೂ ಹೆಚ್ಚಳವಾಗಿದೆ. ಹಿಂದೆ ದರ ವಿಪರೀತ ಹೆಚ್ಚಳವಿದ್ದದ್ದರಿಂದ ಬೇಡಿಕೆ ಇಳಿಕೆಯಾಗಿತ್ತು. ಈಗ ಹೊಸ ಬೆಳೆಯ ಆವಕವಾರಂಭದ ನಂತರ ಮತ್ತೆ ಬೇಡಿಕೆ ಹೆಚ್ಚಳವಾಗಿದೆ.

## ಸೋಯಾ ಎಣ್ಣೆ ದರ ಹೆಚ್ಚಳ

ಜಾಗತಿಕ ಸೋಯಾ ಎಣ್ಣೆ ದರ ಹಿಂದಿನ ಕೆಲವು ವಾರ ಇಳಿಕೆಯ ಹಾದಿಯಲ್ಲಿತ್ತು. ಈಗ ಬೇಡಿಕೆ ಹೆಚ್ಚಳದಿಂದ ಹಾಗೂ ಪಾಮೆಣ್ಣೆಯ ಬೇಡಿಕೆಯೂ ಹೆಚ್ಚಳವಿರುವುದರಿಂದ ಸೋಯಾ ಎಣ್ಣೆ ದರವೂ ಹೆಚ್ಚಳವಾಗುತ್ತಿದೆ. ಆದರೆ ಬೆಳೆಯುವ ದೇಶಗಳಲ್ಲಿ ಉತ್ಪಾದನೆಯೂ ಹೆಚ್ಚಳವಿದ್ದು, ಸೋಯಾ ಎಣ್ಣೆ, ಸೋಯಾಮೀಲ್ ಇವುಗಳ ಉತ್ಪಾದನೆಯೂ ಹೆಚ್ಚಳವಿದ್ದು, ಪೂರೈಕೆ ಸಾಕಷ್ಟಿರುವುದರಿಂದ ದರ ಅತಿಯಾಗಿ ಹೆಚ್ಚಳವಾಗುತ್ತಿಲ್ಲ.

## ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಮತ್ತೆ ಹೆಚ್ಚಳ

ಹಿಂದಿನವಾರ ಇಳಿಕೆ ದಾಖಲಿಸಿದ್ದ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ನಿನ್ನೆ ಹಾಗೂ ಇಂದು ಮತ್ತೆ ಹೆಚ್ಚಳ ಕಂಡಿದೆ. ದರ 160 ರಿಂಗಿಟ್ಸ್, 4.15 ಶೇಕಡಾ ಹೆಚ್ಚಳವಾಗಿ ಟನ್‌ಗೆ 4.15 ರಿಂಗಿಟ್ಸ್ $ 877.60 ಆಗಿದೆ. ತಾಂತ್ರಿಕ ಕಾರಣಗಳಿಂದ ಹಾಗೂ ಇತರ ತೈಲಗಳ ದರ ಹೆಚ್ಚಳದಿಂದ ಪಾಮೆಣ್ಣೆ ದರ ಹೆಚ್ಚಳವಾಗಿದೆಯೆನ್ನಲಾಗಿದೆ.

## 2022–23 ರಲ್ಲಿ ಜಾಗತಿಕ ಸಕ್ಕರೆ ಉತ್ಪಾದನೆ 6.18 ಮಿಲಿಯನ್ ಟನ್ ಮಿಗತೆ

2022 ಅಕ್ಟೋಬರ್ ನಿಂದ 2023 ಸೆಪ್ಟೆಂಬರ್ ತನಕದ ಜಾಗತಿಕ ಸಕ್ಕರೆ ಉತ್ಪಾದನೆ ಅಂದಾಜಿನಲ್ಲಿ ಹಿಂದಿನ ಅಂದಾಜಿನ ಮಿಗತೆಯಾದ 5.571 ಮಿಲಿಯನ್ ಟನ್‌ಗಳಿಂದ 6.185 ಮಿಲಿಯನ್ ಟನ್‌ಗಳಿಗೇರಿಸಿ 130(ಜಾಗತಿಕ ಸಕ್ಕರೆ ಸಂಸ್ಥೆ) ಅಂದಾಜಿಸಿದೆ. ಅದರಂತೆ ಸಕ್ಕರೆ ಉತ್ಪಾದನೆ 182.142 ಮಿಲಿಯನ್ ಟನ್‌ಗಳಾಗಿವೆ. ಹಿಂದಿನ ವರ್ಷದ ಜಾಗತಿಕ ಉತ್ಪಾದನೆ 172.662 ಮಿಲಿಯನ್ ಟನ್‌ಗಳಾಗಿತ್ತೆನ್ನಲಾಗಿದ್ದು, ಬಳಕೆ 174.327 ಟನ್‌ಗಳಾಗಿತ್ತು. ಈ ವರ್ಷ 175.957 ಮಿಲಿಯನ್ ಟನ್ ಜಾಗತಿಕ ಬಳಕೆಯಾಗಬಹುದೆಂದು ಅಂದಾಜಿಸಿದೆ.

## ಜಾಗತಿಕ ಬೇಡಿಕೆ ಹೆಚ್ಚಳ ಹಾಗೂ ದಾಸ್ತಾನು ಇಳಿಕೆಯಿಂದ ಭಾಸ್ಮತಿ ಭತ್ತ ದರ ಹೆಚ್ಚಳ

ಅತಿ ಹೆಚ್ಚಿನ ಜಾಗತಿಕ ಬೇಡಿಕೆ ಹೆಚ್ಚಳ ಹಾಗೂ ನಗಣ್ಯ ದಾಸ್ತಾನು ನಿಂದಾಗಿ ಭಾಸ್ಮತಿ ಭತ್ತಕ್ಕೆ ದರ ಹೆಚ್ಚಳವಾಗಿದ್ದು ಈ ವರ್ಷ ಕ್ವಿಂ.,ಗೆ ಹಿಂದಿನ ವರ್ಷಕ್ಕಿಂತ ರೂ. 400–500 ಹೆಚ್ಚಳವಾಗಿದೆ.

## ಲಾಸಾಲ್ಗಾಂವ್ ಮಾರುಕಟ್ಟೆಯಲ್ಲಿ ನೀರುಳ್ಳಿ ದರ ಕುಸಿತ

ಅಧಿಕ ಪೂರೈಕೆಯಿಂದ ಲಾಸಾಲ್ಗಾಂವ್ ಸಗಟು ಮಾರುಕಟ್ಟೆಯಲ್ಲಿ ಹಿಂದೆ ಹೆಚ್ಚಳವಾಗಿದ್ದ, ನೀರುಳ್ಳಿ ದರ ಕುಸಿತ ಕಂಡಿದೆ. ಕ್ವಿಂ.,ಗೆ ರೂ .500–600 ದರ ಇಳಿಕೆಯಾಗಿದೆ. ಪರಿಣಾಮವಾಗಿ ಇತರ ಮಾರುಕಟ್ಟೆಯಲ್ಲಿ ದರ ಇಳಿಕೆಯಾಗಿದೆ. ಇತರ ರಾಜ್ಯಗಳಲ್ಲಿ ಖಾರೀಫ್ ಬೆಳೆಯ ನೀರುಳ್ಳಿ ಆವಕ ಪ್ರಾರಂಭದ ಹಿನ್ನಲೆಯಲ್ಲಿ ನಾಶಿಕ್‌ನ ಲಾಸಾಲ್ಗಾಂವ್ ಮಾರುಕಟ್ಟೆಯಲ್ಲಿ ಬೇಡಿಕೆ ಇಳಿಕೆಯಾಗಿದೆಯೆನ್ನಲಾಗಿದೆ.

## ಕಾಳುಮೆಣಸು ದರ ದುರ್ಬಲ

ಆಮದು ಹೆಚ್ಚಳ ಹಾಗೂ ದಾಸ್ತಾನುಗಳಿಂದ ಹೆಚ್ಚಿನ ಬಿಡುಗಡೆಯಿಂದಾಗಿ ದೇಶೀ ಮಾರುಕಟ್ಟೆಯಲ್ಲಿ ಕಾಳುಮೆಣಸು ದರ ದುರ್ಬಲವಾಗಿದೆಯೆನ್ನಲಾಗಿದೆ.